ಕಾಣಸಿಗುವ ಕುತೂಹಲ ಹೆಚ್ಚಿಸುವ ಬೇರೆ ಸಿನಿಮಾದ ಪ್ರೋಮೊಗಳು, ಮನೋಜು ಎಂಬ ಯುವಕ ತಂಬಾಕು ಗುಟ್ಕಾ ತಿಂದು ಕ್ಯಾನ್ಸರಿಗೆ ಬಲಿಯಾದ ಕಥೆ ಹೇಳುವ ಎಚ್ಚರಿಕೆಯ ಸಂದೇಶಗಳು, ಜೊತೆಗೆ ಕುಳಿತಿರುವ ಜನಗಳ ಉದ್ವೇಗದ – ನಗುವಿನ ಕಾಮೆಂಟುಗಳು... ಸುತ್ತಲೂ ಹರಡಿರುವ ಕತ್ತಲೆ. ಅದರಲ್ಲಿ ಪ್ರತೀ ಕ್ಯಾರೆಕ್ಟರೂ ನಿಮ್ಮೊಂದಿಗೆ ಮಾತನಾಡುತ್ತದೆ, ಒಮ್ಮೊಮ್ಮೆ ಕ್ಯಾರೆಕ್ಟರೇ ನೀವಾಗುತ್ತೀರಿ. ಯಾಕೆಂದರೆ, ಸಿನಿಮಾ ಬಹುತೇಕ ಮಟ್ಟಿಗೆ ಸಕಲ ಇಂದ್ರಿಯಗಳಿಗೂ ದಕ್ಕುವ ಅನುಭವ.

ಆದರೆ, ನಾನು ಹೇಳಲು ಹೊರಟಿರುವುದು ಸಿನಿಮಾದ ಬಗ್ಗೆ ಅಲ್ಲ. ಸಿನಿಮಾ ನನಗೆ ಜೀವನದಲ್ಲಿ ತಡವಾಗಿ ಭೇಟಿ ಆದ, ಆಗಾಗ ಸಿಗುವ ದೂರದ ಊರಿನ ಸ್ನೇಹಿತರ ಹಾಗೆ. ಆಪ್ತತೆ ಇದೆ, ಅವಲಂಬನೆ ಇಲ್ಲ. ನನ್ನನ್ನು ಸಂಪೂರ್ಣವಾಗಿ ಆವರಿಸಿಕೊಳ್ಳುವುದು ನಾಟಕ ಮಾತ್ರ. ಇದನ್ನು ಹೇಳುತ್ತಿರುವಾಗ ನಾನೊಬ್ಬಳು ಪ್ರೇಕ್ಷಕಿ ಮಾತ್ರ. ನಟರಿಗೆ ನಾಟಕ ಎನ್ನುವುದು ಒಂದು ತುರೀಯ ಸ್ಥಿತಿ, ಅದರ ಬಗ್ಗೆ ಮತ್ತೊಮ್ಮೆ ಮಾತಾಡೋಣ.

ನಾನಿಲ್ಲಿ ಹೇಳಲು ಹೊರಟಿರುವುದು 'ನಾಟಕ ನೋಡುವ ಕ್ರಿಯೆ' ಯ ಬಗ್ಗೆ. ಹಾಗೆ ಹೇಳುವುದಾದರೆ ಸಿನಿಮಾ ಎರಡಕ್ಕೂ 'ನೋಡುವ ಕ್ರಿಯೆ' ಒಂದೇ ಆದರೂ ರಂಗಭೂಮಿಯ ಕಾಣ್ಕೆ ಸಿನಿಮಾಗಿಂತ ಹಲವು ಮಿತಿಗಳ ನಡುವೆಯೂ ಎದ್ದು ನಿಲ್ಲುವ ಒಂದು ಅನುಭವ. ಇಲ್ಲಿ ಪರಕಾಯ ಪ್ರವೇಶ ಕಳೆದುಹೋಗುವಷ್ಟಿಲ್ಲದಿದ್ದರೂ ಆಗಾಗ ಸಾಧ್ಯ ಆಗುವಂಥದ್ದು. ಇದಕ್ಕೆ ಶ್ರಮ ಬೇಕು, ಪ್ರೇಕ್ಷಕರಾಗಿ ನಿಮ್ಮ ತನ್ಮಯತೆ ಬೇಕು, ಮತ್ತೆ ಮತ್ತೆ ಏಳುವ ಡಿಸ್ಟ್ರಾಕ್ಷನ್‌ಗಳ ನಡುವೆಯೂ ನೀವು ನೀವೇ ಆಗಿದ್ದೂ ನಾಟಕದ ಹೊರಗೆ ನಿಂತಾಗಲೂ ಮತ್ತೆ ಮತ್ತೆ ಒಳಗೆ ಪ್ರವೇಶ ಮಾಡಬೇಕು. ಯಾಕೆಂದರೆ, ಇಲ್ಲಿ ನಿಮ್ಮ ಇಂದ್ರಿಯಗಳನ್ನು ಕಟ್ಟಿ ಹಾಕುವ ಮಾರುಕಟ್ಟೆಯ ಆಕರ್ಷಕ ವಿಧಾನಗಳು ಯಾವೂ ಇಲ್ಲ.

ಸಿನಿಮಾ ಮತ್ತು ನಾಟಕ ಎರಡಕ್ಕೂ ಇರುವ ಒಂದು ಕಲಾತೀತ ಸಾಮ್ಯವೆಂದರೆ ಆಟ ಶುರುವಾಗುವ ಮೊದಲಿನ ಕತ್ತಲೆ ಮಾತ್ರ.

'ತಮಸೋಮಾ ಜ್ಯೋತಿರ್ಗಮಯ' ಅನ್ನುವ ಶ್ಲೋಕದ ಸಾಲಿನ ಅಕ್ಷರಶಃ ಅರ್ಥ ಇಲ್ಲಿ ಆಗುತ್ತದೆ. ಉಳಿದೆಲ್ಲಕ್ಕೂ ದುಡ್ಡಿನ ಸ್ಕೇಲು ಉಂಟು. ಟಿಕೇಟು, ಅದನ್ನ ಬುಕ್ ಮಾಡುವ ವಿಧಾನ, ಸಿನಿಮಾ ಹಾಲ್/ರಂಗಮಂದಿರ ಇರುವ ಜಾಗ, ಅಲ್ಲಿನ ಪಾರ್ಕಿಂಗ್ ವ್ಯವಸ್ಥೆ, ಶೌಚಾಲಯಗಳು, ಕುಡಿಯುವ ನೀರಿನ ವ್ಯವಸ್ಥೆ... ಎಲ್ಲ ಅಂದರೆ ಎಲ್ಲವೂ ಭಿನ್ನ.

ಅದೆಲ್ಲದರ ಕೊರತೆ ಮೀರಿ ಕಾಣುವುದು ನಾಟಕ ಎಂಬ ನಿರ್ಮಮ ಅನಿರ್ವಚನೀಯ ಅನುಭವ. ನಾಟಕ ಆರಂಭವಾಗುವ ಯಾವ ಸಂಭ್ರಮಾಚರಣೆ, ಲೋಗೋ ಅನಾವರಣ, ಪ್ರೊಡ್ಯೂಸರ್–ನಿರ್ದೇಶಕರ ಹೆಸರುಗಳು ದೊಡ್ಡ ದೊಡ್ಡ ಅಕ್ಷರದಲ್ಲಿ ತೆರೆಯನ್ನು ಆವರಿಸಿಕೊಳ್ಳುವುದಿಲ್ಲ. ಹಾಂ, ಯಾವುದೋ ಎಳೆದೆಳೆದು ಸಾಗುತ್ತಿರುವ ಭಾಷಣದ ಕಾರ್ಯಕ್ರಮ ಮುಗಿದು ನಾಟಕ ಶುರುವಾಗಬೇಕಿದ್ದರೆ ಮಾತ್ರ ಹಿಂಸೆ ಹೇಳತೀರದಲ್ಲ. ಅದು ಬೇರೆ ವಿಷಯ.

ನಾಟಕ ಅಂದರೆ ಸೀದಾ ಸಾದಾ ಕಥೆಗೇ ನಿಮ್ಮ ನೇರ ಪ್ರವೇಶ. ಇಲ್ಲಿ ಗಿಮಿಕ್‌ಗಳೇ ಇಲ್ಲ. ನೀವು ಪ್ರೇಕ್ಷಕರು. ಅಷ್ಟೋ ಇಷ್ಟೋ ದುಡ್ಡು ಕೊಟ್ಟು ಟಿಕೆಟ್ ತೆಗೆದುಕೊಂಡು ನಾಟಕಕ್ಕೆ ಬಂದಿದ್ದೀರಿ. ನಿಮ್ಮ ಸಮಯವನ್ನ ನಾಟಕ ಬಿಟ್ಟು ಬೇರೆ ಉದ್ದೇಶಗಳಿಗೆ ಬಳಸಿಕೊಂಡು ಜಾಹೀರಾತು ತೋರಿಸಿಯೋ ಮತ್ತ್ಯಾವುದೋ ನಾಟಕದ ಕಂಪ್ಯೂಟರಿನ ಯಾವುದೋ ಪ್ರೋಗ್ರಾಮಿನಲ್ಲಿ ಸೃಷ್ಟಿಯಾದ ದೃಶ್ಯ ತೋರಿಸಿ ಮತ್ತೆ ನಿಮ್ಮ ಮನಸ್ಸನ್ನು ಎಲ್ಲೆಲ್ಲೋ ಎಳೆದಾಡುವುದಿಲ್ಲ.

ವಾಟ್ ಯು ಸೀ ಈಸ್ ವಾಟ್ ಯು ಗೆಟ್. ಇದು ಬೀಜ ಮಂತ್ರ. ಅಂದರೆ, ನಿಮ್ಮ ಕಣ್ಣಿಗೆ ಯಾವುದನ್ನ ಕಂಡು ಇಲ್ಲಿಗೆ ಬಂದಿದ್ದೀರೋ ಅದನ್ನ ಮಾತ್ರ ಮತ್ತು ಅದನ್ನು ಮಾತ್ರವೇ ತೋರಿಸುವುದು. ವ್ಯವಹಾರ ಸಾಫ್. ಬಡ್ಡಿಗೆ ಚಕ್ರ ಬಡ್ಡಿ, ಊಹೂಂ. ಅಸಲು ಮಾತ್ರ. ಮೋಸವಿಲ್ಲದೆ.